**ಸಾಕ್ಷಿಗೆ ದಿನಾಂಕಃ29-08-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಃಮುಂದುವರೆದ ಪಾಟೀಸವಾಲು ಃ ವಾದಿ ಪರ ಶ್ರೀ. ವಿ.ಆರ್.ಎನ್ ವಕೀಲರಿಂದ ಃ**

1. ಸಾಕ್ಷಿಗೆ ವಾದಿಯ ಮನೆಯ ವಿದ್ಯುತ್ ಸಂಪರ್ಕದ ಬಗ್ಗೆ ಅವರು ಸಲ್ಲಿಸಿರುವ ದಿನಾಂಕ 15-06-2022 ರ ತಕರಾರಿನ ಧೃಢೀಕೃತ ನಕಲನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಪಿ-18 ಎಂದು ಗುರುತಿಸಲಾಯಿತು. ವಾದಿಯ ಹೆಂಡತಿ ಫರ್ಜಾನಾ ರವರು ದಾವಾ ಸ್ವತ್ತನ್ನು ಮಂಜೂರು ಮಾಡಿಕೊಡಲು ತಹಸೀಲ್ದಾರ್ ಶೃಂಗೇರಿ ರವರಿಗೆ ನಮೂನೆ 94-ಸಿ ರಡಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯು ತೀರ್ಮಾನ ಆಗುವವರೆಗೂ ಅವರನ್ನು ದಾವಾ ಸ್ವತ್ತಿನಿಂದ ತೆರವು ಗೊಳಿಸಬಾರದು ಎಂದು ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 20511/2021 ರಲ್ಲಿ ದಿನಾಂಕ 19-11-2021 ರಂದು ಆದೇಶ ಮಾಡಿರುತ್ತದೆ ಎಂದರೆ ಸರಿ.

2. ನಾನು ಹೇಳುವಂತೆ ವಾದಿಯು ಯಾವತ್ತೂ ಸಹ ಅವರ ತಂದೆಯ ಮನೆಯಲ್ಲಿ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ಸತ್ಯವೇ ಆಗಿದ್ದಲ್ಲಿ ನಾನು ನ್ಯಾಯಾಲಯಕ್ಕೆ ಅದಕ್ಕೆ ಸಂಬಂಧ ಪಟ್ಟ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಯಾವುದೇ ದಾಖಲಾತಿಗಳು ಇರಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಮತ್ತು ಅವರ ಕುಟುಂಬದವರಿಗೆ ದಾವಾ ಸ್ವತ್ತಿನಲ್ಲಿರುವ ಮನೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ.

3. ದಿನಾಂಕ 15-01-2021 ರಂದು ನಮ್ಮ ಪಂಚಾಯತ್ ನ ಹಿಂದಿನ ಪಿ.ಡಿ.ಒ ಮತ್ತು ಸಿಬ್ಬಂದಿಗಳು ವಾದಿಯ ವಾಸದ ಮನೆಯನ್ನು ಅಕ್ರಮವಾಗಿ ಪ್ರವೇಶಿಸಿ, ಅವರ ಮನೆಯನ್ನು ಕಿತ್ತು ನಾಶ ಪಡೆಸಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ನಮ್ಮ ಪಂಚಾಯತ್ ನ ಹಿಂದಿನ ಪಿ.ಡಿ.ಒ ಮತ್ತು ಸಿಬ್ಬಂದಿಗಳನ್ನು ವಾದಿಯು ಕಷ್ಟದಿಂದ ತಡೆದಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಅವರು ಹಿಂದಿರುಗುವಾಗ ಮತ್ತೊಮ್ಮೆ ಬಂದು ವಾದಿಯ ವಾಸದ ಮನೆಯನ್ನು ನಾಶ ಪಡಿಸುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಘಟನೆಯ ಬಗ್ಗೆ ವಾದಿಯು ಶೃಂಗೇರಿ ಪೋಲೀಸರಿಗೆ ದೂರನ್ನು ನೀಡಲು ಪ್ರಯತ್ನಿಸಿರುತ್ತಾರೆ ಮತ್ತು ಪೋಲೀಸರು ಸದರಿ ಪ್ರಕರಣವು ಸಿವಿಲ್ ವ್ಯಾಜ್ಯ ಆಗಿರುತ್ತದೆ ಎಂದು ತಿಳಿಸಿ, ನ್ಯಾಯಾಲಯದಲ್ಲಿ ನೋಡಿಕೊಳ್ಳುವಂತೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯ ಮನೆಗೆ ಅತಿಕ್ರಮ ಪ್ರವೇಶಿಸಿ, ಅವರ

ಸ್ವಾಧೀನವನ್ನು ಪಡೆಯಲು ನಮಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಆ ರೀತಿ ಪ್ರಯತ್ನವನ್ನು ಪಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

4. ನಿಪಿ-13 ರಿಂದ ನಿಪಿ-16 ಪೋಟೋಗಳು ವಾದಿಯ ವಾಸದ ಮನೆಗೆ ಸಂಬಂಧ ಪಟ್ಟ ಪೋಟೋಗಳು ಆಗಿರುತ್ತದೆ ಎಂದರೆ ಸಾಕ್ಷಿಯು ಪೋಟೋಗಳನ್ನು ನೋಡಿ ನನಗೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ ವಾದಿಯು ಅನದಿಕೃತವಾಗಿ ಕಟ್ಟಿರುವ ಮನೆಗಳ ಪೋಟೋವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಸಲು ನನಗೆ ಯಾವುದಾದರೂ ತೊಂದರೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಸದರಿ ಮನೆಯನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯು ಮತ್ತು ಅವರ ಹೆಂಡತಿ ಸುಮಾರು 15 ವರ್ಷಗಳ ಹಿಂದೆ ಮನೆಯನ್ನು ನಿರ್ಮಿಸಿ ಇಲ್ಲಿಯವರೆಗೂ ದಾವಾ ಸ್ವತ್ತಿನಲ್ಲಿಯೇ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಅದಕ್ಕೆ ಪೂರಕವಾಗಿ ಪ್ರಸ್ತುತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಯು ನಿಪಿ-13 ರಿಂದ ನಿಪಿ-16 ಪೋಟೋಗಳಲ್ಲಿರುವ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನಾನು ನೋಡಿದ್ದರೂ ಈಗ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃಮರುವಿಚಾರಣೆ ಇಲ್ಲಃಃ**

**(ದಿನಾಂಕಃ29-08-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**